

ಇದ್ದ ಮಾರ್ಗ ಒಂದೇ – ಮೇಲಿನಿಂದ ಜೋತುಬಿದ್ದ ಹಗ್ಗದ ಏಣಿ ಹಿಡಿದು ಹತ್ತುವುದು. ಅಲ್ಲಿರುವ ಕ್ರೈಸ್ತ ಸನ್ಯಾಸಿಗಳಿಗೆ ಅಭದ್ರತೆ ಎನಿಸಿದ ಸಮಯದಲ್ಲಿ ಆ ಹಗ್ಗದ ಏಣಿಗಳನ್ನು ಮೇಲೆ ಎಳೆದುಕೊಳ್ಳಲಾಗುತ್ತಿತ್ತು. ತುರ್ಕರ ಆಕ್ರಮಣ ಹೆಚ್ಚಿದಂತೆಲ್ಲ, ಇಲ್ಲಿಗೆ ರಕ್ಷಣೆಗಾಗಿ ಬರುವವರ ಸಂಖ್ಯೆಯು ಹೆಚ್ಚಿ ಹದಿನಾರನೇ ಶತಮಾನದ ಹೊತ್ತಿಗೆ ಮೊನಾಸ್ಟರಿಗಳ ಸಂಖ್ಯೆ 24ಕ್ಕೆ ಮುಟ್ಟಿತು.

ನಂತರದಲ್ಲಿ ಬುಟ್ಟಿಗಳನ್ನು ಹಗ್ಗಕ್ಕೆ ಕಟ್ಟಿ ಅದರಲ್ಲಿ ಜನರನ್ನು ಕುಳ್ಳಿರಿಸಿ ಕೆಳಗಿಸಲಾಗುತ್ತಿತ್ತು ಅಥವಾ ಮೇಲೆ ಎಳೆಯಲಾಗುತಿತ್ತು. ತೀರಾ 20ನೇ ಶತಮಾನದವರೆಗೂ ಅದು ಜನಸಾಮಾನ್ಯರಿಗೆ ಅಭೇದ್ಯವಾಗೇ ಇತ್ತು. 1920ರಲ್ಲಿ ಬಂಡೆಗಳನ್ನು ಕೊರೆದು ಮೆಟ್ಟಿಲುಗಳನ್ನು ನಿರ್ಮಿಸಲಾಯಿತು. ಸೇತುವೆಗಳ, ರಸ್ತೆಗಳ ನಿರ್ಮಾಣವೂ ಆಯಿತು.

ವಿಶ್ವಯುದ್ಧದ ಸಮಯದಲ್ಲಿ ಈ ಜಾಗ ಬಾಂಬ್ ದಾಳಿಗೆ ಒಳಗಾಯಿತು. ಬಹಳಷ್ಟು ಮೊನಾಸ್ಟರಿಗಳು ನಾಶವಾದವು. ಬೆಲೆಬಾಳುವ ವಸ್ತುಗಳು ಕಳುವಾದವು. ಈಗ ಇಪ್ಪತ್ತಾಲ್ಕರಲ್ಲಿ ಕೇವಲ ಆರು ಮೊನಾಸ್ಟರಿಗಳು ಮಾತ್ರವೇ ಉಳಿದಿದ್ದು, ಅವು ಪ್ರವಾಸಿ ಕೇಂದ್ರವಾಗಿಯೂ ಧಾರ್ಮಿಕ ಕೇಂದ್ರವಾಗಿಯೂ ಪ್ರಸಿದ್ಧಿ ಪಡೆದಿವೆ. ವಿಶ್ವಪರಂಪರೆಯ ಪಟ್ಟಿಯಲ್ಲಿ ಸ್ಥಾನ ಕೂಡ ಗಳಿಸಿವೆ.

ಗ್ರೀಸ್ ದೇಶದ ಎರಡನೇ ಮುಖ್ಯ ಪಟ್ಟಣವಾದ ಥೆಸ್ಸಲೋನಿಕಿಯಿಂದ 6.30ರ ನಸುಕಿಗೆ ಹೊರಟಿದ್ದ ನಮ್ಮನ್ನು ಬಸ್ ತಂದು ಕಲಂಬಾಕದಲ್ಲಿ ಇಳಿಸಿದಾಗ 10 ಗಂಟೆಯಾಗಿತ್ತು. ಅಲ್ಲಿಂದ ಮೊನಾಸ್ಟರಿಗಳನ್ನು ತಲುಪಲು ಒಂದು ಬಸ್ಸಿನ ವ್ಯವಸ್ಥೆ ಇತ್ತು. ನಿಧಾನವಾಗಿ ತಿರುವುಮುರುವಾಗಿದ್ದ ರಸ್ತೆಗಳನ್ನು ಬಳಸುತ್ತಾ ಬಸ್ಸು ಮೇಲೇರಿತು. ನಾವು ಅಲ್ಲಿನ ಎಲ್ಲಕ್ಕಿಂತ ದೊಡ್ಡದಾದ ಗ್ರೇಟ್ ಮೀಟಿಯೋರಾ ಮೊನಾಸ್ಟರಿ ಎದುರು ಇಳಿದುಕೊಂಡೆವು. ಹಳೆಯದಾದ ಮೊನಾಸ್ಟರಿ. ಒಂದೊಂದೇ ಮೆಟ್ಟಿಲುಗಳನ್ನು ಏರುತ್ತ ಟಿಕೆಟ್ ಕೌಂಟರ್ ತಲುಪುವಷ್ಟರಲ್ಲಿ ಬೆವರಿಳಿಯುತ್ತಿತ್ತು. ಮೂರು ಯುರೋ ಶುಲ್ಕ ತೆತ್ತು ಒಳಪ್ರವೇಶಿಸಿದೆವು. ಅಲ್ಲೊಂದು ಸಣ್ಣ ವಸ್ತುಸಂಗ್ರಹಾಲಯ. ಹಿಂದೆ ಬಳಸುತ್ತಿದ್ದ ಅಡುಗೆಮನೆ ಮತ್ತು ದಿನಬಳಕೆಯ ಎಷ್ಟೋ ವಸ್ತುಗಳನ್ನು ಅಲ್ಲಿಡಲಾಗಿತ್ತು. ಸಣ್ಣ ಚರ್ಚ್ ಒಂದಿದ್ದು ಸುಮಾರು 500 ವರ್ಷಗಳಷ್ಟು ಹಳೆಯದಾದ ಭಿತ್ತಿಚಿತ್ರಗಳನ್ನು ಅಲ್ಲಿ ಕಾಣಬಹುದಿತ್ತು. ಕೋಣೆಯೊಂದರಲ್ಲಿ ಹಿಂದೆ ಅಲ್ಲಿ ವಾಸವಿದ್ದವರ ತಲೆಬುರುಡೆ ಹಾಗು ಮೂಳೆಗಳನ್ನು ಸಂಗ್ರಹಿಸಿಡಲಾಗಿತ್ತು. ಅಲ್ಲಿ ಇಂದು ಸಹ ಕ್ರೈಸ್ತ ಸನ್ಯಾಸಿಗಳು ವಾಸವಿರುವುದರಿಂದ, ಹೆಚ್ಚಿನ ಭಾಗಗಳಿಗೆ ಪ್ರವೇಶವಿರಲಿಲ್ಲ.

ಅಲ್ಲಿಂದ ಎರಡನೇ ಮೊನಾಸ್ಟರಿಯಾದ ವರ್ಲಾಮ್ ಕಾಲುನಡಿಗೆಯ ದೂರವಷ್ಟೇ. ಅಲ್ಲೂ 3 ಯುರೋ ಪ್ರವೇಶ ಶುಲ್ಕ ಕೊಟ್ಟು ಒಳಹೊಕ್ಕೆವು. ಇದು ಅಲ್ಲಿನ ಎರಡನೇ ದೊಡ್ಡ ಮೊನಾಸ್ಟರಿ. 1540ರ ಸುಮಾರಿಗೆ ಕಟ್ಟಲಾದ ಇದು ಚಿಕ್ಕ ಸಂಗ್ರಹಾಲಯದ ಜೊತೆಗೆ ಒಂದು ಚರ್ಚ್ ಅನ್ನು ಒಳಗೊಂಡಿದೆ. ಅಲ್ಲಿನ ಇತರ ಮೊನಾಸ್ಟರಿಗಳಾದ ಹೋಲಿ ಟ್ರಿನಿಟಿ ಮೊನಾಸ್ಟರಿ, ಸಂತ ನಿಕೋಲಸ್ ಮೊನಾಸ್ಟರಿಗಳಲ್ಲಿ ಕೆಲ ಸನ್ಯಾಸಿಗಳು ವಾಸವಾಗಿದ್ದರೆ – ರಸನೊವ್ ಮೊನಾಸ್ಟರಿ ಹಾಗೂ ಸಂತ ಸ್ಟೆಫೆನ್ ಮೊನಾಸ್ಟರಿಗಳು ಸನ್ಯಾಸಿನಿಯರಿಗಾಗಿ ಮೀಸಲಾಗಿವೆ.

ಮೀಟಿಯೋರಾದ ಸುತ್ತಮುತ್ತಲಿನ ಜಾಗ ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತದೆ. ನೀಲಾಕಾಶ, ಎತ್ತರದ ಮುಗಿಲಿಗೆ ಮುತ್ತಿಕ್ಕುವ ಬಂಡೆಗಳು, ಅವುಗಳಂಚಲ್ಲಿ ನಾವು, ಕೆಳಗಡೆ ಬಯಲು, ತಪ್ಪಲಲ್ಲಿ ಹರಡಿರುವ ಕಲಂಬಾಕ ಪಟ್ಟಣ ನೋಡುತ್ತಾ ನಿಂತರೆ ಕಲಾವಿದನ ಚಿತ್ರದಂತೆ ಭಾಸವಾಗುತ್ತದೆ.

ಚಲನಚಿತ್ರಗಳಲ್ಲಿ ಈ ಜಾಗವನ್ನು ಬಳಸಿಕೊಳ್ಳಲಾಗಿದೆ. ಹಾಗಾಗಿ ಇದು ಹೆಸರುವಾಸಿ. ಇಲ್ಲಿಗೆ ಬರುವವರ ಸಂಖ್ಯೆಯೂ ವರ್ಷಾನುವರ್ಷ ಏರುತ್ತಲೇ ಇದೆ. ಅಲ್ಲಿನ ಜನರ ವ್ಯಾಪಾರೀ ಮನೋಭಾವ ಹೆಚ್ಚಿ, ಮೀಟಿಯೋರಾದ ಸೌಂದರ್ಯಕ್ಕೆ ನಿಧಾನವಾಗಿ ಮಬ್ಬು ಕವಿಯತೊಡಗಿದೆ.

## ಹೋಗುವುದು ಹೇಗೆ?

ಮುಖ್ಯ ಪಟ್ಟಣಗಳಾದ ಅಥೆನ್ಸ್ ಅಥವಾ ಥೆಸ್ಸಲೋನಿಕಿಯಿಂದ ಇಲ್ಲಿಗೆ ಬಸ್ ಸೌಲಭ್ಯವಿದೆ. ಅಲ್ಲಿಂದ ಹೊರಟು ತ್ರಿಕಾಲ ಎಂಬಲ್ಲಿ ಇಳಿದು ಕಲಂಬಾಕ ತಲುಪಲು ಇನ್ನೊಂದು ಬಸ್ ತೆಗೆದುಕೊಳ್ಳಬೇಕು. ತ್ರಿಕಾಲದಿಂದ ಕಲಂಬಾಕಾ ತಲುಪಲು ಕೇವಲ ಅರ್ಧ ಗಂಟೆ ಸಾಕು.

ಕಲಂಬಾಕಾದಿಂದ ದಿನಕ್ಕೆ ಎರಡರಂತೆ ಮೀಟಿಯೋರಾದ ಮೊನಾಸ್ಟರಿಗಳನ್ನು ತಲುಪಲು ಬಸ್ಸಿನ ವ್ಯವಸ್ಥೆ ಇದೆ. ಕಲಂಬಾಕದಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಇದೆ. ಹಲವರು ಅಲ್ಲಿ ಚಾರಣ ಮಾಡಿ ಮೊನಾಸ್ಟರಿಗಳನ್ನು ತಲುಪುತ್ತಾರೆ. ಮುಖ್ಯ ಪಟ್ಟಣಗಳಿಂದ ಗೈಡೆಡ್ ಟೂರ್‌ಗಳ ವ್ಯವಸ್ಥೆಯೂ ಇದೆ. •